# ವಿದ್ಯಾ ಪ್ರವೇಶ–



## ಏನು? ಏಕೆ? ಹೇಗೆ?

**ತಮಗೆಲ್ಲರಿಗೂ ಆತ್ಮೀಯ ಸ್ವಾಗತ.**

# ಅಧ್ಯಾಯ–1
# ವಿದ್ಯಾ ಪ್ರವೇಶ– ಅರ್ಥ ಮತ್ತು ಮಹತ್ವ

- ❖ಹೊಸ ಶಿಕ್ಷಣ ನೀತಿ–2020ನ್ನು ನಾವೀಗಾಗಲೇ ಸ್ವೀಕರಿಸಿದ್ದೇವೆ.
- ❖ಹೊಸ ಶಿಕ್ಷಣ ನೀತಿ ಅನ್ವಯ ಶಿಕ್ಷಣವನ್ನು ಹೊಸ ದೃಷ್ಟಿಕೋನದ ಅಡಿಯಲ್ಲಿ ನೋಡುವ ಅವಕಾಶ ನಮಗೆ ಲಭ್ಯವಾಗಿದೆ.
- ❖ಜಾಗತಿಕ ಬದಲಾವಣೆಗಳಿಗೆ ಅನುಗುಣವಾಗಿ ಶೈಕ್ಷಣಿಕ ಆಲೋಚನಾ ಕ್ರಮಗಳು, ಬೋಧನಾ ಉಪಕ್ರಮಗಳು ಹಾಗೂ ತರಗತಿ ಪ್ರಕ್ರಿಯೆಗಳಲ್ಲಿ ಬದಲಾವಣೆಯ ಅವಶ್ಯಕತೆ ಇದೆ.
- ❖ನಮಗೆ ಲಭ್ಯವಾಗುವ ಕಲಿಕಾ ಸಮಯ ಹಾಗೂ ಮಗುವಿನ ಕಲಿಕಾ ಅವಕಾಶದ ಸಮಯಕ್ಕೆ ಚಟುವಟಿಕೆಗಳನ್ನು ರೂಪಿಸಿ ಅಳವಡಿಸುವ ಮೂಲಕ ಕಲಿಕಾ ಕೊರತೆಯನ್ನು ನೀಗಿಸುವ ಸವಾಲು.

# ಬುನಾದಿ ಹಂತದ ಆರು ವರ್ಷಗಳ ಶಾಲಾ ಶಿಕ್ಷಣ ಸಂರಚನೆ

**ಬುನಾದಿ ಅಕ್ಷರ ಮತ್ತು ಸಂಖ್ಯಾ ಜ್ಞಾನ**
**6 ವರ್ಷ (3 ರಿಂದ 9 ವರ್ಷ)**

| | | | | | |
|---|---|---|---|---|---|
| ಪೂರ್ವ ಪ್ರಾಥಮಿಕ–1 (3–4 ವರ್ಷ) | ಪೂರ್ವ ಪ್ರಾಥಮಿಕ–2 (4–5 ವರ್ಷ) | ಪೂರ್ವ ಪ್ರಾಥಮಿಕ–3 (5–6 ವರ್ಷ) +ಬಾಲವಾಟಿಕಾ | ವಿದ್ಯಾ ಪ್ರವೇಶ (3ತಿಂಗಳು)<br>ತರಗತಿ–1 (6–7 ವರ್ಷ) | ತರಗತಿ–2 (7–8 ವರ್ಷ) | ತರಗತಿ–3 (8–9 ವರ್ಷ) |

- 2022–23ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ವಿದ್ಯಾಪ್ರವೇಶ ಎಂಬ ವಿನೂತನ ಶಾಲಾ ಸಿದ್ಧತಾ ಕಾರ್ಯಕ್ರಮದ ಮೂಲಕ ತಮ್ಮೆಲ್ಲರನ್ನು ಆತ್ಮೀಯವಾಗಿ ಇಲಾಖೆ ಸ್ವಾಗತಿಸುತ್ತಿದೆ.
- ಮೂರು ತಿಂಗಳ ಶಾಲಾ ಸಿದ್ಧತಾ ಕಾರ್ಯಕ್ರಮವು 01ನೇ ತರಗತಿಗೆ ಪೂರಕವಾಗಿ ರೂಪುಗೊಂಡಿದೆ.
- ಪ್ರತೀ ಮಗುವೂ ಕಲಿಕಾ ಕಂದರವನ್ನು ಅನುಭವಿಸಿ ಬಂದಿದೆ ಎಂಬುದನ್ನು ನಾವು ಒಪ್ಪಲೇಬೇಕು.
- ಮಗುವನ್ನು ಶಾಲಾ ಸನ್ನಿವೇಶಕ್ಕೆ ಸಿದ್ಧಗೊಳಿಸುವ ಸಂದರ್ಭದಲ್ಲಿ ಅನೇಕ ಅಂಶಗಳ ಕಡೆಗೆ ನಾವು ಗಮನ ಹರಿಸಬೇಕಾಗುತ್ತದೆ.
- ಕೇವಲ ಭೌತಿಕವಾಗಿ ತರಗತಿ ಪ್ರಕ್ರಿಯೆಗೆ ಹೊಂದಿಸುವುದು ಮಾತ್ರವಲ್ಲದೆ, ಭಾವನಾತ್ಮಕವಾಗಿ ಹಾಗೂ ಸಾಮಾಜಿಕವಾಗಿ ಹೊಂದಿಸುವುದು ತೀರಾ ಅಗತ್ಯ.
- ಈ ಹಿನ್ನೆಲೆಯಲ್ಲಿ 03 ಮುಖ್ಯ ಗುರಿಗಳನ್ನು ಪ್ರಧಾನವಾಗಿರಿಸಿಕೊಂಡು ವಿದ್ಯಾ ಪ್ರವೇಶ ಕಾರ್ಯಕ್ರಮವು ರೂಪುಗೊಂಡಿದೆ. ಅವುಗಳೆಂದರೆ

# ನಿಪುಣ್ ಭಾರತ್ ಆಧರಿಸಿದ ಮೂರು ಮುಖ್ಯ ಗುರಿಗಳು

- ಉತ್ತಮ ಆರೋಗ್ಯ ಮತ್ತು ಸ್ವಾಸ್ಥ್ಯ ನಿರ್ವಹಣೆಯಲ್ಲಿ ಮಕ್ಕಳು ಸಮರ್ಥರಾಗುವುದು.
- ಪರಿಣಾಮಕಾರಿ ಸಂವಹನಕಾರರಾಗಿ ಮಕ್ಕಳು ರೂಪುಗೊಳ್ಳುವುದು.
- ಸಕ್ರಿಯ ಕಲಿಕಾರ್ಥಿಗಳಾಗಿ, ಪರಿಚಿತ ಪರಿಸರದೊಂದಿಗೆ ಮಕ್ಕಳು ಸಂಪರ್ಕ ಸಾಧಿಸುವುದು

# ವಿದ್ಯಾ ಪ್ರವೇಶ– ಏನು? ಏಕೆ?

- ಹೊಸ ಶಿಕ್ಷಣ ನೀತಿ–2020 ರ ಆಶಯದಂತೆ ಒಂದನೆಯ ತರಗತಿ ಮಕ್ಕಳಿಗೆ 3 ತಿಂಗಳ ಅಥವಾ 12 ವಾರಗಳ "ಆಡುತ್ತಾ ಕಲಿಯುವ" ಶಾಲಾ ಸಿದ್ಧತಾ ಕಾರ್ಯಕ್ರಮದ ಭಾಗವಾಗಿ ವಿದ್ಯಾ ಪ್ರವೇಶ ವನ್ನು ಶಿಫಾರಸ್ಸು ಮಾಡಲಾಗಿದೆ.
- ಕೋವಿಡ್ ಸಾಂಕ್ರಾಮಿಕ ಸನ್ನಿವೇಶದಿಂದಾಗಿ ಶಾಲಾ ಶಿಕ್ಷಣದಿಂದ ದೂರ ಉಳಿದ ಮಕ್ಕಳನ್ನು ಶಾಲಾ ಸನ್ನಿವೇಶಕ್ಕೆ ಆತ್ಮೀಯವಾಗಿ ಆಹ್ವಾನಿಸಲು, ಕಲಿಕಾ ಪ್ರಕ್ರಿಯೆಗೆ ಅವರನ್ನು ಮರು ಹೊಂದಾಣಿಕೆ ಮಾಡಿಕೊಳ್ಳಲು ಇದರಲ್ಲಿ ಅವಕಾಶ ಕಲ್ಪಿಸಿದೆ.
- ಎಲ್ಲಾ ಮಕ್ಕಳಿಗೂ ಮನೆ ಮತ್ತು ಶಾಲೆಯಲ್ಲಿ ಸಂತಸದಾಯಕ, ಭಾವನಾತ್ಮಕ, ಸುರಕ್ಷಿತ ಕಲಿಕಾ ವಾತಾವರಣವನ್ನು ಖಾತ್ರಿ ಪಡಿಸುವ ಅಗತ್ಯತೆ ಬಗ್ಗೆ ಇದು ಮಾರ್ಗದರ್ಶಿಸುತ್ತದೆ.
- ಒತ್ತಡ ಮುಕ್ತ ವಾತಾವರಣದಲ್ಲಿ ಮಕ್ಕಳು ಸಂತಸದಾಯಕವಾಗಿ ಕಲಿಯುವ ಅವಕಾಶಗಳೊಂದಿಗೆ ದಿವ್ಯಾಂಗ ಮಕ್ಕಳ ಅಗತ್ಯತೆಯನ್ನೂ ಗುರುತಿಸಿಕೊಳ್ಳುವುದರ ಕಡೆಗೂ ಆದ್ಯ ಗಮನ ನೀಡುತ್ತದೆ.
- ಮಗುವಿನ ಮಾತೃಭಾಷೆ ಅಥವಾ ಮನೆಯ ಭಾಷೆಯನ್ನು ಸ್ವೀಕರಿಸುವುದರ ಜೊತೆಗೆ ಉಳಿದ ಭಾಷಾ ಕಲಿಕೆಗೂ ತರಗತಿ ಕೋಣೆಗಳು ಅವಕಾಶ ಕಲ್ಪಿಸಬೇಕು ಎನ್ನುವುದನ್ನು ನಿರ್ದೇಶಿಸುತ್ತದೆ.

# ವಿದ್ಯಾ ಪ್ರವೇಶದ ಮಹತ್ವ

- ಹೊಸ ಶಿಕ್ಷಣ ನೀತಿ–2020 ರ ಆಶಯದಂತೆ ವಿದ್ಯಾ ಪ್ರವೇಶ ರೂಪುಗೊಂಡಿದ್ದರೂ ದೇಶಾದ್ಯಂತ ಗಮನ ಸೆಳೆಯುವ ಶಾಲಾ ಸಿದ್ಧತಾ ಕಾರ್ಯಕ್ರಮ ಇದಾಗಿದೆ.
- ಒಂದನೇ ತರಗತಿಯ ಕಲಿಕೆಗೆ ಮಗುವನ್ನು ಬೌದ್ಧಿಕವಾಗಿ, ದೈಹಿಕವಾಗಿ, ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ಸಿದ್ಧಗೊಳಿಸುವುದರ ಚೌಕಟ್ಟನ್ನು ರೂಪಿಸಿಕೊಡುತ್ತದೆ.
- ಮಗುವಿನ ಮುಕ್ತ ಕಲಿಕೆಯನ್ನು ಮನೋವಿಕಾಸ ವಲಯದಿಂದ ಶೈಕ್ಷಣಿಕ ಮನೋವಿಜ್ಞಾನ ವಲಯದ ಕಡೆಗೆ ನಿರ್ದೇಶಿಸಲು ಯೋಜಿತ ಚಟುವಟಿಕೆಗಳನ್ನು ರೂಪಿಸಲು ಅವಕಾಶ ಕಲ್ಪಿಸುತ್ತದೆ.
- ಯೋಜಿತ ತರಗತಿ ಪ್ರಕ್ರಿಯೆಯಲ್ಲಿ ಕಲಿಕಾ ಸಮಯದ ಮತ್ತು ಕಲಿಯುವ ಅವಕಾಶದ ಸಮಯವನ್ನು ಸದ್ಬಳಕೆ ಮಾಡಿಕೊಳ್ಳಲು ದಿನವಾರು, ವಾರವಾರು ಚಟುವಟಿಕೆಗಳ ನಿರ್ವಹಣೆಗೆ ಮಹತ್ವ ಕಲ್ಪಿಸುತ್ತದೆ.
- ಮೂರು ತಿಂಗಳು ಅಥವಾ ಹನ್ನೆರಡು ವಾರಗಳ ಕಲಿಕೆಯೊಂದಿಗೆ ವಿಕಾಸ–ಬೆಳವಣಿಗೆ–ಅಭಿವೃದ್ಧಿ ಅಡಿಯಲ್ಲಿ ದಿನದಿಂದ ದಿನಕ್ಕೆ ಪ್ರತಿ ಮಗುವು ಬೆಳೆಯಲು ವಿಫುಲವಾದ ಅವಕಾಶಗಳನ್ನು ಸೃಜಿಸುತ್ತದೆ.

# ವಿದ್ಯಾ ಪ್ರವೇಶದ ಮಹತ್ವ

- ಗ್ರಹಣ ಶಕ್ತಿ, ಕಲ್ಪನಾ ಶಕ್ತಿ, ಊಹಾ ಶಕ್ತಿಗಳ ವೃದ್ಧಿಗೆ ಪ್ರಾಮುಖ್ಯತೆಯನ್ನು ನೀಡಿದ್ದು, ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ವಿವಿಧ ಆಯಾಮಗಳಲ್ಲಿ ಕೆಲಸ ಮಾಡುವ ಅವಕಾಶವನ್ನು ಕಲ್ಪಿಸಿದೆ.
- ಮುಕ್ತ ಮಾತುಕತೆ, ಹೊರಾಂಗಣ/ಒಳಾಂಗಣಗಳ ಅರಿವು, ಸ್ಥಳೀಯ ಪರಿಸರದೊಂದಿಗೆ ಸಂಖ್ಯಾಜ್ಞಾನ, ಸ್ನಾಯು ಚಲನಾ ಕೌಶಲ, ಕಥಾ ಸಮಯ ಆಡುವ ಸಮಯಗಳಲ್ಲಿ ತೊಡಗಿಸಿಕೊಳ್ಳುತ್ತಾ, ಭಾಷೆಯ ಅಭಿವೃದ್ಧಿಯೊಂದಿಗೆ ಉತ್ತಮ ಸಂವಹನಕಾರರಾಗುವಂತೆ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲು ಬೆಳಕು ಚೆಲ್ಲುತ್ತದೆ.
- ಮಗುವನ್ನು ಉದ್ದೇಶಿತ ಕಲಿಕೆಯ ಕಡೆಗೆ ನಿರ್ದೇಶಿಸುವುದರ ಕ್ರಮ, ಪ್ರಕ್ರಿಯೆಯ ವಿಧಾನ ಹಾಗೂ ಅಪೇಕ್ಷಿತ ಸಾಧನೆಯನ್ನು ಸ್ವಯಂ ಗುರುತಿಸಿಕೊಳ್ಳುವುದರ ಜೊತೆಗೆ ಶಿಕ್ಷಕರು ಸ್ವಯಂ ಮೌಲ್ಯಮಾಪನ ಮಾಡಿಕೊಳ್ಳುವಂತೆ ಪ್ರೇರೇಪಿಸುತ್ತದೆ.

# ವಿದ್ಯಾ ಪ್ರವೇಶದ ವ್ಯಾಪ್ತಿ

TARGET GROUP Children : ಒಂದನೇ ತರಗತಿಗೆ ಪ್ರವೇಶಿಸುವ ಮಕ್ಕಳು

ಮೂರು ತಿಂಗಳ ಆಟ ಆಧಾರಿತ ಶಾಲಾ ಸಿದ್ಧತಾ ಕೈಪಿಡಿ ಒಂದನೇ ತರಗತಿ ಮಕ್ಕಳಿಗಾಗಿ. **Three-month Play-based School Preparation Module for Grade-I Children**

ಮೂರು ತಿಂಗಳು ಅಥವಾ ಹನ್ನೆರಡು ವಾರಗಳ ಕಾಲಾವಕಾಶ

DURATION Three Months or 12 Weeks

ವಾರಕ್ಕೆ ಐದು ದಿನಗಳು , ದಿನಕ್ಕೆ ನಾಲ್ಕು ಗಂಟೆಗಳ ಚಟುವಟಿಕಾ ಸಮಯ

TRANSACTION Five Days a Week and Four Hours a Day

# ವಿದ್ಯಾ ಪ್ರವೇಶದ ವ್ಯಾಪ್ತಿ

- ಒಂದನೇ ತರಗತಿಯ ಆರಂಭಿಕ ಮೂರು ತಿಂಗಳು ಅಥವಾ 12 ವಾರಗಳು.
- ಶಾಲಾ ಶಿಕ್ಷಣದ ಆರಂಭಿಕ ಐದು ವರ್ಷಗಳ ಎಫ್.ಎಲ್.ಎನ್. ಹಂತದಲ್ಲಿ ಇದರ ವ್ಯಾಪ್ತಿಯನ್ನು ಗುರುತಿಸಬಹುದು.
- ಪ್ರತಿ ದಿನ ನಾಲ್ಕು ಗಂಟೆಗಳಂತೆ ವಾರದ ಐದು ದಿನಗಳಿಗೆ ಕಲಿಕಾ ಅವಧಿಗಳನ್ನು ನಿಗದಿ ಪಡಿಸಿದೆ.
- ಕಲಿಕಾ ಅವಧಿಯ ನಾಲ್ಕು ಗಂಟೆಗಳು ನಮ್ಯವಾಗಿದ್ದು, ನಿಗದಿಪಡಿಸಿದ ಚಟುವಟಿಕೆಗಳಿಗೆ ತಕ್ಕಂತೆ ಸಮಯವನ್ನು ಹೊಂದಾಣಿಕೆ ಮಾಡಿಕೊಳ್ಳಲು ಶಿಕ್ಷಕರಿಗೆ ಮುಕ್ತ ಅವಕಾಶ ಕಲ್ಪಿಸಿದೆ.
- ಪ್ರತಿ ಶನಿವಾರದ ಅವಧಿಗಳನ್ನು ವಾರದ ಚಟುವಟಿಕೆಗಳ ಪುನರಾವರ್ತನೆ ಹಾಗೂ ಮುಂದಿನ ವಾರದ ಕಾರ್ಯಯೋಜನೆಗೆ ಮೀಸಲಿಟ್ಟಿದೆ.

# ವಿದ್ಯಾ ಪ್ರವೇಶದ ಉದ್ದೇಶಗಳು:

- ವಿವಿಧ ಸನ್ನಿವೇಶ/ಹಿನ್ನೆಲೆಗಳಿಂದ ಶಾಲೆಯನ್ನು ಪ್ರವೇಶಿಸುವ ವಿದ್ಯಾರ್ಥಿಗಳಲ್ಲಿ ಶಾಲಾ ಸಿದ್ಧತೆಯೊಂದಿಗೆ ಒಂದನೇ ತರಗತಿ ಕಲಿಕೆಗೆ ಅಣಿಗೊಳಿಸುವುದು.
- ಸರಳ/ಮೃದು ಧೋರಣೆಯೊಂದಿಗೆ ಒಂದನೇ ತರಗತಿ ಕಲಿಕೆಗೆ ಮಕ್ಕಳನ್ನು ಮಾನಸಿಕವಾಗಿ, ಭಾವನಾತ್ಮಕವಾಗಿ, ಶಾರೀರಿಕವಾಗಿ ಸಿದ್ಧಗೊಳಿಸುವುದು.
- ಆಟ ಕೇಂದ್ರಿತ, ಸಂತಸದಾಯಕ ವಾತಾವರಣದಲ್ಲಿ, ವಯೋಮಾನ ಆಧರಿಸಿದ ಯುಕ್ತ ಕಲಿಕಾ ಅನುಭವಗಳನ್ನು ಒದಗಿಸಿಕೊಡುವ ಮೂಲಕ ಸಮಗ್ರ ಅಭಿವೃದ್ಧಿಯ ಕಡೆಗೆ ಮಕ್ಕಳನ್ನು ಮನ್ನಡೆಸುವುದು.
- ಆಟಗಳ ಮೂಲಕ ಓದು-ಬರಹದ ಕಲಿಕೆ ಮತ್ತು ಸಂಖ್ಯಾ ಜ್ಞಾನ ಕೌಶಲವನ್ನು ಗಳಿಸುವುದರೊಂದಿಗೆ ಬುನಾದಿ ಸಾಮರ್ಥ್ಯಗಳಲ್ಲಿ ಹಿಡಿತ ಸಾಧಿಸುವುದು.

# ವಿದ್ಯಾ ಪ್ರವೇಶದ ಬೋಧನಾ ತತ್ವ

- ಬೋಧನಾ ತತ್ವವು ಪ್ರಮುಖವಾಗಿ ಆಟ ಕೇಂದ್ರಿತವಾಗಿದ್ದು ಬೌದ್ಧಿಕ, ಭಾವನಾತ್ಮಕ ಮತ್ತು ಸ್ಥೂಲ ಸ್ನಾಯು ಚಲನಾ ಕೌಶಲಗಳ ಸಾಮರ್ಥ್ಯ ವೃದ್ಧಿಯೊಂದಿಗೆ ಬುನಾದಿ ಅಕ್ಷರ ಮತ್ತು ಸಂಖ್ಯಾ ಜ್ಞಾನದ ಕಲಿಕೆಯೆಡೆಗೆ ಮಕ್ಕಳನ್ನು ಪ್ರೇರೇಪಿಸುತ್ತದೆ.
- ಮಗುವಿನ ಆಸಕ್ತಿ ಅಭಿರುಚಿಗಳನ್ನು ಪೋಷಿಸುವ ಮೂಲಕ ಅನ್ವೇಷಣೆ, ಸಮಸ್ಯೆ ಪರಿಹಾರ, ತಾರ್ಕಿಕ ಆಲೋಚನೆಗಳೊಂದಿಗೆ ಅವರ ಗ್ರಹಣ ಶಕ್ತಿ, ಕಲ್ಪನಾ ಶಕ್ತಿ, ಊಹಾ ಶಕ್ತಿಯ ವಿಸ್ತರಣೆಗೆ ಅಕಾಶವನ್ನು ಕಲ್ಪಿಸಿ ಕೊಡುತ್ತದೆ.
- 03 ಗುರಿಗಳ ಅಡಿಯಲ್ಲಿ ಮಕ್ಕಳ ಕಲಿಕಾ ಪ್ರಕ್ರಿಯೆಯನ್ನು ಬಲವರ್ಧನೆಗೊಳಿಸುವುದು. 1. ಆಟ, 2. ಸಂವಹನ, 3. ಪರಿಸರ

# ವಿದ್ಯಾ ಪ್ರವೇಶದ ಬೋಧನಾ ತತ್ವ




ಮಕ್ಕಳು ಲವಲವಿಕೆಯಿಂದ ತೊಡಗಿಸಿಕೊಳ್ಳಲು ಮತ್ತು ಕ್ರಿಯಾಶೀಲ ಕಲಿಕಾರ್ಥಿಗಳನ್ನಾಗಿಸಲು

# ವಿದ್ಯಾ ಪ್ರವೇಶದ ಬೋಧನಾ ತತ್ವ

- ಆಟದ ಮಾಧ್ಯಮ:-
- 1. ಮುಕ್ತ ಆಟ:- ಮುಕ್ತ ಆಟಗಳು ಮಕ್ಕಳ ಆಯ್ಕೆಗಳಿಗೆ ಮತ್ತು ಸ್ವಯಂ ತೀರ್ಮಾನಗಳಿಗೆ ಹಾಗೂ ಇತರರ ಅಭಿರುಚಿ ಆಸಕ್ತಿಯೊಂದಿಗೆ ಅವರ ಹಕ್ಕುಗಳನ್ನು ಗ್ರಹಿಸಿಕೊಳ್ಳಲು ನೆರವಾಗುತ್ತವೆ.
- ಆಸಕ್ತಿದಾಯಕ ತರಗತಿ ಕೋಣೆಯ ಪ್ರಕ್ರಿಯೆಗೆ ಶಿಫಾರಸು ಮಾಡುವುದಲ್ಲದೆ ಅನ್ವೇಷಣಾ ಪ್ರವೃತ್ತಿಗೆ, ಸಂಗೀತಾಭಿರುಚಿಗೆ, ಗೊಂಬೆಗಳ ಮೂಲೆಗಳನ್ನು ಸಿದ್ಧಗೊಳಿಸುವುದರ ಬಗ್ಗೆ ಬೆಳಕು ಚೆಲ್ಲುತ್ತದೆ.
- 2. ನಿರ್ದೇಶಿತ ಆಟಗಳು:- ಈ ಆಟಗಳು ಶಿಕ್ಷಕರ ನಿರ್ದೇಶನದೊಂದಿಗೆ ಕೂಡಿದ್ದು ಸರಿಯಾದ ಮಾರ್ಗದರ್ಶನವನ್ನು ನೀಡುವುದರ ಮೂಲಕ ಇಂತಹ ಆಟಗಳನ್ನು ಆಡಿಸಬೇಕಿದೆ.
- ಪೂರಕ ಒಳಾಂಗಣ ಮತ್ತು ಹೊರಾಂಗಣ ವಾತಾವರಣವನ್ನು ಸೃಜಿಸಿಕೊಡುವ ಮೂಲಕ ನಿರೀಕ್ಷಿತ ಕಲಿಕೆಯ ಫಲಗಳನ್ನು ತಲುಪಬಹುದು.

# ವಿದ್ಯಾ ಪ್ರವೇಶದ ಬೋಧನಾ ತತ್ವ

## 2. ಸಂವಹನ

- ಆಟ ಕೇಂದ್ರಿತ ಕಲಿಕಾ ಪ್ರಕ್ರಿಯೆಯು ಮಗು ಮತ್ತು ಶಿಕ್ಷಕ, ಮಗು ಮತ್ತು ಸಹವರ್ತಿ, ಮಗು ಮತ್ತು ಒಡಹುಟ್ಟಿದವರ ನಡುವಿನ ಸಂವಹನಕ್ಕೆ ಆದ್ಯತೆ ನೀಡುತ್ತದೆ.
- 03 ರೀತಿಯ ಸಂವಹನವನ್ನು ವಿದ್ಯಾಪ್ರವೇಶದಲ್ಲಿ ಗುರುತಿಸಲಾಗಿದೆ.
- 1. ಸಹವರ್ತಿ ನಡುವಿನ ಸಂವಹನ, 2. ಸಾಮಗ್ರಿಯೊಂದಿಗಿನ ಸಂವಹನ, 3. ಹಿರಿಯರು ಅಥವಾ ಶಿಕ್ಷಕರೊಂದಿಗಿನ ಸಂವಹನ

# ವಿದ್ಯಾ ಪ್ರವೇಶದ ಬೋಧನಾ ತತ್ವ

## 3. ಪರಿಸರ:–

- ಮಕ್ಕಳು ಸ್ವಭಾವಿಕವಾಗಿ ಕುತೂಹಲಕಾರಿಗಳಾಗಿದ್ದು, ಪ್ರತಿಯೊಂದರ ಬಗ್ಗೆ ತಿಳಿದುಕೊಳ್ಳಲು ಹೆಚ್ಚು ಆಸಕ್ತಿ ಹೊಂದಿರುತ್ತಾರೆ.
- ಮಕ್ಕಳ ಆಸಕ್ತಿಯನ್ನು ಒಪ್ಪಿಕೊಳ್ಳುವ ಮತ್ತು ಪ್ರೇರೇಪಿಸುವ ನಿಟ್ಟಿನಲ್ಲಿ ನಮ್ಮ ಚಟುವಟಿಕೆಗಳ ಸಾಮಗ್ರಿಗಳು ವಿನ್ಯಾಸಗೊಳ್ಳಬೇಕು.
- ಕೌಶಲ್ಯಾಧಾರಿತ ವಸ್ತುಗಳು, ಮಾಡಿಕಲಿ ಚಟುವಟಿಕಾ ಸಾಮಗ್ರಿಗಳು, ಊಹಾ ಶಕ್ತಿಯನ್ನು ಹೆಚ್ಚಿಸುವಂತಹ ಚಿತ್ರ ಸರಣಿಗಳೊಂದಿಗೆ ಮುಕ್ತವಾಗಿ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುವಂತಹ ತರಗತಿ ಸನ್ನಿವೇಶವನ್ನು ನಿರ್ಮಿಸುವುದು ಅತಿ ಅವಶ್ಯ

# ವಿದ್ಯಾ ಪ್ರವೇಶದ ಬೋಧನಾ ತತ್ವ

## ಯೋಜನೆ ಮತ್ತು ನಿರ್ವಹಣೆ

- ಮೂಲ ಸಾಮರ್ಥ್ಯ ಹಾಗೂ ಕಲಿಕೆಯ ಫಲಗಳನ್ನು ಅಭಿವೃದ್ಧಿ ಗುರಿಗಳ ಅಡಿಯಲ್ಲಿ ನಿರ್ಧರಿಸಲಾಗಿದೆ.
- ನನ್ನ ಸಮಯ (Free Indore play) ಶೀರ್ಷಿಕೆ ಅಡಿಯಲ್ಲಿ 8 ರೀತಿಯ ಚಟುವಟಿಕಾ ಮೂಲೆಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು ಶಿಕ್ಷಕರು ಅಗತ್ಯ ಸಾಮಗ್ರಿಗಳ ಸಂಗ್ರಹದೊಂದಿಗೆ ಯೋಜನೆ ತಯಾರಿಸಿಕೊಳ್ಳುವುದು.
- ದಿನವಾರು ಚಟುವಟಿಕೆಗಳಿಗೆ ಸಲಹಾತ್ಮಕ ಸೂಚನೆ ಮತ್ತು ಮಾರ್ಗದರ್ಶನಗಳನ್ನು ನೀಡಲಾಗಿದೆ.
- ಯೋಜನೆಯ ಸಿದ್ಧತೆಯ ಪೂರ್ವದಲ್ಲಿ ಶಿಕ್ಷಕರು ಚಟುವಟಿಕೆ/ಪಠ್ಯಕ್ರಮ ಬಯಸುವ ಸಾಮಗ್ರಿಗಳ ಅಗತ್ಯತೆಯ ಕಡೆಗೆ ಗಮನ ಹರಿಸಿ, ಸ್ಥಳೀಯ ಸಂಪನ್ಮೂಲಗಳನ್ನು ಹಾಗೂ ವೆಚ್ಚರಹಿತ ಸಾಮಗ್ರಿಗಳನ್ನು ಸಂಗ್ರಹಿಸಿಕೊಳ್ಳುವುದು.
- ಮಕ್ಕಳನ್ನು ಪುನರಾವರ್ತಿತ ಚಟುವಟಿಕೆಗಳಿಗೆ ಒಳಪಡಿಸುವ ಸಂದರ್ಭದಲ್ಲಿ ಅಗತ್ಯವಿರುವ ಹೆಚ್ಚುವರಿ ಕಲಿಕಾಹಾಳೆಗಳನ್ನು ಬಳಕೆ ಮಾಡಿಕೊಳ್ಳುವ ಮೂಲಕ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸುವುದು.

# ವಿದ್ಯಾ ಪ್ರವೇಶದ ಬೋಧನಾ ತತ್ವ

## ಚಟುವಟಿಕಾ ಮೂಲೆಗಳು

- ಆಟಿಕೆ/ಮಾಡಿ ಕಲಿ ಮೂಲೆ
- ಬಿಲ್ಡಿಂಗ್ ಬ್ಲಾಕ್ಸ ಮೂಲೆ
- ಗಣಿತ ಮೂಲೆ
- ಅನ್ವೇಷಣಾ/ವಿಜ್ಞಾನ ಮೂಲೆ
- ಬರೆಯುವ ಮೂಲೆ
- ಗೊಂಬೆ ಮೂಲೆ
- ಕಲೆಗೊಂದು ನೆಲೆ/ ಕರಕುಶಲ ಮೂಲೆ
- ಓದುವ/ತರಗತಿ ಗ್ರಂಥಾಲಯ ಮೂಲೆ

# ಆದ್ಯತೆಗೆ ಒಳಪಡುವ ಅಂಶಗಳು

- ಮೊದಲು ಪ್ರತಿ ಮಗುವಿನ ಹಿನ್ನಲೆಯನ್ನು ಅರ್ಥ ಮಾಡಿಕೊಳ್ಳಬೇಕು.
  - ಸಾಧ್ಯವಾದಲ್ಲಿ ಪ್ರತಿ ಮಗುವಿನ ಮನೆಗೆ ಭೇಟಿ ನೀಡುವುದು.
  - ಮಗುವಿನ ಕುಟುಂಬದೊಂದಿಗಿನ ಸಂಬಂಧವನ್ನು ಧನಾತ್ಮಕವಾಗಿ ವಿಸ್ತರಿಸುವುದು.
- ಪ್ರತಿ ಮಗುವೂ ಅವನ ಅಥವಾ ಅವಳ ಸಾಮರ್ಥ್ಯದ ಮೇಲೆ ಸ್ವತಂತ್ರವಾಗಿ ಕಲಿಯುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.
- ಶಿಕ್ಷಕರ ಪಾತ್ರ ನಿರ್ವಹಣೆಯೆಂದರೆ, ಮಕ್ಕಳನ್ನು ಪ್ರೇರೇಪಿಸುವುದು, ಅವರ ಹೃದಯಕ್ಕೆ ಮೃದುಧೋರಣೆಯ ಪ್ರತಿಸ್ಪಂದನೆ ನೀಡುವುದು,

# ಆದ್ಯತೆಗೆ ಒಳಪಡುವ ಅಂಶಗಳು

- ನೀವು ಯೋಜನೆ ರೂಪಿಸಿಕೊಂಡಿದ್ದರೂ, ತರಗತಿಯ ಸನ್ನಿವೇಶಕ್ಕೆ ಹಾಗೂ ಮಕ್ಕಳ ಆಸಕ್ತಿಗೆ ಅನುಗುಣವಾಗಿ ಅದನ್ನು ಅಗತ್ಯ ಬದಲಾವಣೆಗೆ ಒಳಪಡಿಸಬಹುದಾಗಿದೆ.
- ಯೋಜನೆಯನ್ನು ಕಾರ್ಯಗತಗೊಳಿಸುವ ಸಂದರ್ಭದಲ್ಲಿ ಶಿಕ್ಷಕ ನಿರ್ದೇಶಿತ, ಮಗು ನಿರ್ದೇಶಿತ ಹಾಗೂ ಒಳಾಂಗಣ, ಹೊರಾಂಗಣ ಮತ್ತು ದೊಡ್ಡ-ಚಿಕ್ಕ ಗುಂಪುಗಳ ಚಟುವಟಿಕೆಗಳ ಅನುಷ್ಠಾನವನ್ನು ಮರೆಯುವಂತಿಲ್ಲ.
- ಸಾಧ್ಯವಾದಷ್ಟು ಸ್ಥಳೀಯವಾಗಿ ಲಭ್ಯವಾಗುವ ಸಾಮಗ್ರಿ ಮತ್ತು ಗೊಂಬೆಗಳ ಬಳಕೆಯಿರಲಿ. ಮಕ್ಕಳು ತಮ್ಮ ಕೌಶಲ್ಯವನ್ನು ಬಳಸಿ ಸಾಮಗ್ರಿಗಳನ್ನು ಸುಲಭವಾಗಿ ಉಪಯೋಗಿಸಲು ಮತ್ತು ಸುರಕ್ಷಿತ ಕ್ರಮಗಳು ಒಳಗೊಂಡಿರುವಂತೆ ನೋಡಿಕೊಳ್ಳುವುದು.

# ಧನ್ಯವಾದಗಳು

